# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 315

ಸದಸ್ಯರ ಹೆಸರು : **ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 10-12-2025

| | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಇಲಾಖೆಯಲ್ಲಿ ರಾಜ್ಯ ರಸ್ತೆ ಸಾರಿಗೆ ನಿರ್ವಹಣೆಯ ಸಂಬಂಧ ಎಐ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ನಿರ್ವಹಣೆಯನ್ನು ಜಾರಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; (ವಿವರಗಳನ್ನು ನೀಡುವುದು) | ರಾಜ್ಯ ರಸ್ತೆ ಸಾರಿಗೆ ನಿರ್ವಹಣೆಯ ಸಂಬಂಧ ಎಐ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ನಿರ್ವಹಣೆಯನ್ನು ಜಾರಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆ.<br><br>ಈ ನಿಟ್ಟಿನಲ್ಲಿ ಸಾರಿಗೆ ಇಲಾಖೆಯು ಕೇಂದ್ರ ಸರ್ಕಾರದ ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯದ ನಿರ್ದೇಶನದಂತೆ ಮೋಟಾರು ವಾಹನ ಕಾಯ್ದೆ 1988ರ ಕಲಂ 136A ಮತ್ತು ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 167Aನ್ನು ಜಾರಿಗೊಳಿಸುವ ದಿಸೆಯಲ್ಲಿ, Electronic Monitoring and Enforcement of Road Safety ರಡಿ Black Spot ಇರುವ ರಾಷ್ಟ್ರೀಯ / ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಹೆಚ್ಚಿನ ಸಂಚಾರ ಸಾಂದ್ರತೆಯ ಜಂಕ್ಷನ್‌ಗಳಲ್ಲಿ (ಒಟ್ಟು 80 ಸ್ಥಳಗಳಲ್ಲಿ) AI ಆಧಾರಿತ ಕ್ಯಾಮರಾಗಳನ್ನು ಅಳವಡಿಸುವ ಯೋಜನೆಯು ಪ್ರಗತಿಯಲ್ಲಿರುತ್ತದೆ.<br><br>ಸಾರಿಗೆ ಇಲಾಖೆಯು ಈಗಾಗಲೇ ರಾಜ್ಯದ 07 ಟೋಲ್ ಪ್ಲಾಜಾಗಳಲ್ಲಿ AI ಆಧಾರಿತ ಕ್ಯಾಮರಾಗಳನ್ನು SMART ENFORCEMENT ಯೋಜನೆಯಡಿ ಅಳವಡಿಸಿ ವಾಹನ ಸವಾರರುಗಳಿಗೆ ರಸ್ತೆ ಸುರಕ್ಷತೆ ಜಾಗೃತಿ ಮತ್ತು ತಿಳುವಳಿಕೆ ಮೂಡಿಸುವ (automated smart and road safety awareness sensitization) ಕಾರ್ಯವನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗದೆ. |
| ಆ. | ಆಡಳಿತ ನಿರ್ವಹಣೆಗೆ ಡಿಜಿಟಲ್ ಆಡಳಿತ ನಿರ್ವಹಣೆ ಮತ್ತು ಇ-ಆಡಳಿತವನ್ನು ಪೂರ್ಣ ಮಟ್ಟದಲ್ಲಿ ಜಾರಿಗೊಳಿಸಲಾಗಿದೆಯೇ; ಜಾರಿಗೊಳಿಸದೆ ಇದ್ದಲ್ಲಿ ಕಾರಣಗಳೇನು; | ಸಾರಿಗೆ ಇಲಾಖೆಯ ಅಡಿಯಲ್ಲಿ ಬರುವ ಇಲಾಖೆ ಮತ್ತು ನಿಗಮ/ಸಂಸ್ಥೆಗಳಲ್ಲಿ ಆಡಳಿತ ನಿರ್ವಹಣೆಗೆ ಡಿಜಿಟಲ್ ಆಡಳಿತ ನಿರ್ವಹಣೆ ಮತ್ತು ಇ-ಆಡಳಿತವನ್ನು ಜಾರಿಗೊಳಿಸಲಾಗಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br><br>**ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ**<br>ಆಡಳಿತ ನಿರ್ವಹಣೆಗೆ ಡಿಜಿಟಲ್ ಆಡಳಿತ ನಿರ್ವಹಣೆ ಮತ್ತು ಇ-ಆಡಳಿತವನ್ನು ಪೂರ್ಣಮಟ್ಟದಲ್ಲಿ ಜಾರಿಗೊಳಿಸಲು ಸಾರಿಗೆ ಇಲಾಖೆಯಿಂದ ಕೈಗೊಂಡ ಕ್ರಮಗಳ ಕುರಿತ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |

| | ಪ್ರಶ್ನೆ | ಉತ್ತರ |
|---|---|---|
| | | **ಕ.ರಾ.ರ.ಸಾ. ನಿಗಮ:**<br>ಕರಾರಸಾ ನಿಗಮವು ತನ್ನ ಕಾರ್ಯಚಟುವಟಿಕೆಗಳ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಇ-ಆಡಳಿತ (ಇಲೆಕ್ಟ್ರಾನಿಕ್ ಆಡಳಿತ ವ್ಯವಸ್ಥೆ) ಜಾರಿಗೊಳಿಸಿದೆ. ಪ್ರಯಾಣಿಕರ ಸೇವೆಗಳ ಕ್ಷೇತ್ರದಲ್ಲಿ ಆನ್‌ಲೈನ್ ಟಿಕೆಟ್ ಬುಕಿಂಗ್ (AWATAR 4.0), ಸ್ಮಾರ್ಟ್ ETM, ವಿದ್ಯಾರ್ಥಿ ಪಾಸ್ ಸೇವೆಗಳನ್ನು ಒದಗಿಸಲಾಗುತ್ತಿದೆ. ಘಟಕಗಳಲ್ಲಿನ ಕಾರ್ಯಾಚರಣೆಗೆ ಡಿಪೋ ಕಂಪ್ಯೂಟರೈಶೇಷನ್ ಸಿಸ್ಟಮ್ಸ್ ತಂತ್ರಾಂಶ ಅಳವಡಿಸಲಾಗಿದೆ. ಸಿಬ್ಬಂದಿಗಳ ನೇಮಕಾತಿ, ತರಬೇತಿ, ಕಲ್ಯಾಣ ಮತ್ತು ಮಾನವ ಸಂಪನ್ಮೂಲ ನಿರ್ವಹಣೆಗೆ ಈ-HRMS, ಈ-ಪೆರೋಲ್, ನೇಮಕಾತಿ, ಡ್ರೈವಿಂಗ್ ಟೆಸ್ಟ್ ಟ್ರ್ಯಾಕ್, ಆರೋಗ್ಯ ಯೋಜನೆ, BI ಡ್ಯಾಶ್‌ಬೋರ್ಡ್ ಮುಂತಾದವುಗಳನ್ನು ಅಳವಡಿಸಲಾಗಿದೆ.<br><br>ಇದಲ್ಲದೆ, ಇ-ಆಫೀಸ್, ಆನ್ ಲೈನ್ ಆರ್‌ಟಿಐ, ಕೋರ್ಟ್ ಕೇಸ್ ಮಾನಿಟರಿಂಗ್, ಸಿಎಂ ಡ್ಯಾಶ್‌ಬೋರ್ಡ್, ಸೇವಾ ಸಿಂಧು, ಮಾಹಿತಿ ಕಣಜ ಮುಂತಾದವುಗಳ ಮೂಲಕ ಪಾರದರ್ಶಕತೆ ಹಾಗೂ ದಕ್ಷತೆಯನ್ನು ವೃದ್ಧಿಸಲಾಗಿದೆ.<br><br>**ಬೆಂ.ಮ.ಸಾ. ಸಂಸ್ಥೆ:**<br>ಇ-ಆಡಳಿತ ವ್ಯವಸ್ಥೆಯನ್ನು ಪೂರ್ಣವಾಗಿ ಜಾರಿಗೊಳಿಸಲಾಗಿದೆ.<br><br>**ವಾ.ಕ.ರ.ಸಾ. ಸಂಸ್ಥೆ:**<br>ಡಿಜಿಟಲ್ ಆಡಳಿತವನ್ನು ಭಾಗಶಃವಾಗಿ ಹಾಗೂ ಇ-ಆಡಳಿತ ವ್ಯವಸ್ಥೆಯ ಭಾಗವಾಗಿರುವ ಇ-ಆಪೀಸ್‌ನ್ನು ಕೇಂದ್ರ ಕಛೇರಿ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗಿದೆ.<br><br>**ಕ.ಕ.ರ.ಸಾ. ನಿಗಮ:**<br>ಕೇಂದ್ರ ಕಛೇರಿಯಲ್ಲಿ ಇ-ಆಡಳಿತ ಜಾರಿಗೊಳಿಸಲಾಗಿದೆ. ಮುಂದುವರೆದು, ನಿಗಮದ ಎಲ್ಲಾ ವಿಭಾಗಗಳಲ್ಲಿ ಇ-ಆಡಳಿತ ಅಳವಡಿಸಲು KSWAN ಸಂಪರ್ಕಕ್ಕಾಗಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, CeG ಇವರನ್ನು ಕೋರಲಾಗಿದೆ. |
| ಇ. | ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಪರಿಣಾಮಕಾರಿಗೊಳಿಸಲು ಮತ್ತು ಸ್ನೇಹಮಯಿಗೊಳಿಸಲು ಸಾರಿಗೆ ಇಲಾಖೆ ಯಾವ ಯಾವ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ; ಯಾವ ಯಾವ ಹೊಸ ತಂತ್ರಜ್ಞಾನ ಜಾರಿಗೊಳಿಸಲಾಗಿದೆ; | ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಸಾರಿಗೆ ಸೇವೆಗಳನ್ನು ಪರಿಣಾಮಕಾರಿಗೊಳಿಸಲು ಮತ್ತು ಸ್ನೇಹಮಯಿಗೊಳಿಸಲು ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |

| | ಪ್ರಶ್ನೆ | ಉತ್ತರ |
|---|---|---|
| ಈ. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯನ್ನು ಆರ್ಥಿಕವಾಗಿ ಹೆಚ್ಚು ಸದೃಢಗೊಳಿಸಲು ಸಾರಿಗೆ ಇಲಾಖೆ ಯೋಜನೆಗಳಲ್ಲಿ ಪಿಪಿಪಿ ಮಾಡಲ್ ಯೋಜನೆಯನ್ನು ರಸ್ತೆ ನಿರ್ಮಾಣ ನಿರ್ವಹಣೆ ಸಂಗ್ರಹ ಹಾಗೂ ಇತರೆ ಚಟುವಟಿಕೆಗಳಲ್ಲಿ ಜಾರಿಗೊಳಿಸುವ ಯೋಜನೆ ಇದೆಯೇ? (ಮಾಹಿತಿಗಳನ್ನು ನೀಡುವುದು) | **ಕ.ರಾ.ರ.ಸಾ. ನಿಗಮ:**<br><br>ನಿಗಮಕ್ಕೆ ಸಂಬಂಧಿಸಿದಂತೆ ಪಿಪಿಪಿ ಮಾಡಲ್ ಯೋಜನೆಯ ವಿವರಗಳು ಈ ಕೆಳಕಂಡಂತಿವೆ.<br><br>1. ಬೆಂಗಳೂರು ಮೆಜೆಸ್ಟಿಕ್ ಬಸ್ ನಿಲ್ದಾಣದ ಜಾಗವನ್ನು'ಪ್ರಾಜೆಕ್ಟ್ ಮೆಜೆಸ್ಟಿಕ್' ಯೋಜನೆಯಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಪುನರ್ ಅಭಿವೃದ್ಧಿಪಡಿಸಿ, ವಾಣಿಜ್ಯ ಸಂಕೀರ್ಣದೊಂದಿಗೆ ಸಾರಿಗೆ ಹಬ್ ನಿರ್ಮಿಸಲು ಯೋಜಿಸಿದೆ. ಸದರಿ ಯೋಜನೆಗೆ ವಹಿವಾಟು ಸಲಹಾಗಾರರನ್ನು ನೇಮಿಸಲಾಗಿದ್ದು, ಪ್ರಸ್ತುತ ಯೋಜನೆಯು ಆರಂಭಿಕ ಹಂತದಲ್ಲಿರುತ್ತದೆ.<br><br>2. ಸಾರ್ವಜನಿಕ ಸುಗಮ ಸಂಚಾರಕ್ಕಾಗಿ ಹಾಗೂ ಸಾರಿಗೆ ನಿಗಮಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವ ಉದ್ದೇಶದಿಂದ ಬೆಂಗಳೂರು ಪೂರ್ವ ಭಾಗದ ಕೆ.ಆರ್.ಪುರಂ ನಲ್ಲಿ ಹೊಸ ಸ್ಯಾಟಲೈಟ್ ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಭಾರತೀಯ ದೂರಸಂಪರ್ಕ ಉದ್ಯಮಕ್ಕೆ ಸೇರಿರುವ 05 ಎಕರೆ ಜಮೀನನ್ನು ಖರೀದಿಸುವ ಪ್ರಕ್ರಿಯೆ ಸರ್ಕಾರದ ಮಟ್ಟದಲ್ಲಿ ಪ್ರಗತಿಯಲ್ಲಿರುತ್ತದೆ.<br><br>**ವಾ.ಕ.ರ.ಸಾ.ಸಂಸ್ಥೆ:**<br>ವಾ.ಕ.ರ.ಸಾ.ಸಂಸ್ಥೆಗೆ ಸಂಬಂಧಿಸಿದಂತೆ ಪಿಪಿಪಿ ಮಾಡಲ್ ಯೋಜನೆಯಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಮುಂದೆ ಒಟ್ಟು 02 ಪ್ರಸ್ತಾವನೆಗಳನ್ನು ಮಂಡಿಸಿದ್ದು, ಸದರಿ ಎರಡು ಯೋಜನೆಗಳಿಗೆ ಸಮಾಲೋಚಕರ ಸಲಹೆಗಾರರನ್ನು ನಿಯೋಜಿಸಲು ತಾತ್ವಿಕ ಅನುಮೋದನೆ ದೊರೆತಿದ್ದು, ಅದರಂತೆ ಸಮಾಲೋಚಕ ಸಲಹೆಗಾರರನ್ನು ನೇಮಿಸುವ ಟೆಂಡರ್ ಆಹ್ವಾನಿಸಲು ಕ್ರಮಜರುಗಿಸಲಾಗುತ್ತಿದೆ. ವಿವರ ಈ ಕೆಳಗಿನಂತಿದೆ.<br>1. ಹುಬ್ಬಳ್ಳಿ ಗೋಕುಲ್ ರಸ್ತೆಯಲ್ಲಿರುವ 01ಎ. 08 ಗುಂಟೆ ಹಳೇ ಗೆಸ್ಟ್ ಹೌಸ್ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವುದು.<br>2. ಹುಬ್ಬಳ್ಳಿ ಗೋಕುಲ್ ರಸ್ತೆಯಲ್ಲಿರುವ ಸಂಸ್ಥೆಯ ಸಿಬ್ಬಂದಿ ವಸತಿ ಗೃಹದ 05ಎ.11.38 ಗುಂಟೆಯ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವುದು.<br><br>ಸದರಿ ಎರಡು ಯೋಜನೆಗಳಲ್ಲಿ 4ನೇ ಕರೆಯ ಟೆಂಡರ್ ಹಂತದ ಪ್ರಕ್ರಿಯೆ ಪ್ರಗತಿಯಲ್ಲಿ ಇರುತ್ತವೆ. |

**ಟಿಡಿ 85 ಟಿಡಿಕ್ಯೂ 2025**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.

## ಅನುಬಂಧ-1

**ಸಾರಿಗೆ ಇಲಾಖೆಯಲ್ಲಿ ರಾಜ್ಯ ರಸ್ತೆ ಸಾರಿಗೆ ನಿರ್ವಹಣೆಯ ಸಂಬಂಧ ಎಐ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ನಿರ್ವಹಣೆಯನ್ನು ಜಾರಿಗೊಳಿಸುವ ಕುರಿತು ಸಾರಿಗೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:**

2024-25ನೇ ಸಾಲಿನಲ್ಲಿ ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಜಿಲ್ಲೆಗಳ ಹೊರವಲಯದಲ್ಲಿರುವ 20 ಸ್ಥಳಗಳಲ್ಲಿ ಎಲೆಕ್ಟ್ರಾನಿಕ್ ಸಾಧನಗಳನ್ನು (AI ಆಧಾರಿತ ಕ್ಯಾಮೆರಾಗಳು) ಸ್ಥಾಪಿಸುವ ಪ್ರಕ್ರಿಯೆಯಲ್ಲಿದೆ ಮತ್ತು ಕಮಾಂಡ್-ಅಂಡ್-ಕಂಟ್ರೋಲ್ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದ್ದು ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಜಿಲ್ಲೆ ಹೆಸರು | AI ಕ್ಯಾಮೆರಾಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರದ ಹೊರ ವಲಯ | 06 |
| 2 | ಮೈಸೂರು ಜಿಲ್ಲೆ | 05 |
| 3 | ಕೋಲಾರ ಜಿಲ್ಲೆ | 03 |
| 4. | ತುಮಕೂರು ಜಿಲ್ಲೆ | 03 |
| 5. | ರಾಮನಗರ ಜಿಲ್ಲೆ | 03 |
| **ಒಟ್ಟು** | | **20** |

2024-25ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಘೋಷಿಸಿದಂತೆ ಈ ಕೆಳಕಂಡ 10 ಜಿಲ್ಲೆಗಳಲ್ಲಿ ಸುಮಾರು 60 ಸ್ಥಳಗಳಲ್ಲಿ AI ಆಧಾರಿತ ಸ್ಮಾರ್ಟ್ ಕ್ಯಾಮೆರಾಗಳನ್ನು ಅಳವಡಿಸಲು ಯೋಜಿಸಲಾಗಿರುತ್ತದೆ.

| ಕ್ರ. ಸಂ. | ಜಿಲ್ಲೆ ಹೆಸರು | ಕ್ರ. ಸಂ. | ಜಿಲ್ಲೆ ಹೆಸರು |
|---|---|---|---|
| 1 | ದಾವಣಗೆರೆ | 6 | ಹಾವೇರಿ |
| 2 | ಧಾರವಾಡ | 7 | ಹೊಸಪೇಟೆ |
| 3 | ಕಲಬುರಗಿ | 8 | ಬಳ್ಳಾರಿ |
| 4 | ಬೆಳಗಾವಿ | 9 | ವಿಜಯಪುರ |
| 5 | ಚಿತ್ರದುರ್ಗ | 10 | ದಕ್ಷಿಣ ಕನ್ನಡ. |

ಇದಲ್ಲದೆ ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ 07 ಟೋಲ್ ಬೂತ್ ಪ್ಲಾಜಾಗಳಲ್ಲಿ ಸ್ವಯಂಚಾಲಿತ ರಸ್ತೆ ಸುರಕ್ಷತಾ ಜಾಗೃತಿ ಮತ್ತು ರಸ್ತೆ ಸುರಕ್ಷತಾ ಸಂವೇದನೆಗಾಗಿ AI-ಚಾಲಿತ ಕ್ಯಾಮೆರಾಗಳು ಮತ್ತು LED ಪ್ರದರ್ಶನ ಘಟಕಗಳನ್ನು ಸ್ಥಾಪಿಸಲಾಗಿದೆ.
ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ NH-275

- ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇ NH-275
- ವಿಮಾನ ನಿಲ್ದಾಣ ರಸ್ತೆ, NH-44 (ಬೆಂಗಳೂರು-ಹೈದರಾಬಾದ್)
- ಅತ್ತಿಬೆಲೆ ಟೋಲ್, NH-44 (ಬೆಂಗಳೂರು-ಚೆನ್ನೈ)
- ಪಾರ್ಲೆ ಕಾರ್ಖಾನೆ ಸ್ಥಳ, NH-48 (ಬೆಂಗಳೂರು-ಪುಣೆ)
- ಹಿಟ್ನಾಲ್ ಟೋಲ್, NH-67 (ಹುಬ್ಬಳ್ಳಿ-ಹೊಸಪೇಟೆ)
- ತುಮಕೂರು ಟೋಲ್, NH-48 (ಬೆಂಗಳೂರು-ಪುಣೆ).

ಸದರಿ ಯೋಜನೆಯ ಕಮಾಂಡ್-ಅಂಡ್-ಕಂಟ್ರೋಲ್ ಕೇಂದ್ರವನ್ನು ಸಾರಿಗೆ ಆಯುಕ್ತರ ಕಚೇರಿ ಬೆಂಗಳೂರು ಇಲ್ಲಿ ಸ್ಥಾಪಿಸಲಾಗುತ್ತಿದೆ.

**ಅನುಬಂಧ-2**

**ಆಡಳಿತ ನಿರ್ವಹಣೆಗೆ ಡಿಜಿಟಲ್ ಆಡಳಿತ ನಿರ್ವಹಣೆ ಮತ್ತು ಇ-ಆಡಳಿತವನ್ನು ಪೂರ್ಣ ಮಟ್ಟದಲ್ಲಿ ಜಾರಿಗೊಳಿಸಲು ಸಾರಿಗೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:**

ರಾಜ್ಯದಲ್ಲಿ ಕಲಿಕಾ / ಚಾಲನಾ ಅನುಜ್ಞಾ ಪತ್ರ (DL) ಮತ್ತು ನೋಂದಣಿ ಪ್ರಮಾಣಪತ್ರ (RC) ಸೇವೆಗಳನ್ನು ನಾಗರೀಕರಿಗೆ ಒದಗಿಸುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರಿಕೃತ ವೆಬ್ ಆಧಾರಿತ ಸಾರಥಿ ಮತ್ತು ವಾಹನ್ ತಂತ್ರಾಂಶವನ್ನು ಎನ್.ಐ.ಸಿ.ರವರ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ್ದು, ಸದರಿ ತಂತ್ರಾಂಶನ್ನು ರಾಜ್ಯದಲ್ಲಿಯೂ ಬಳಸಿಕೊಂಡು ನಾಗರೀಕರಿಗೆ ಆನ್ ಲೈನ್ ಮೂಲಕ ಸೇವೆಗಳನ್ನು ವಿತರಿಸಲಾಗುತ್ತಿದೆ. ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ರಾಜ್ಯದಲ್ಲಿ ಸಾರಥಿ ಸೇವೆಯ ಒಟ್ಟು 14 ಸೇವೆಗಳನ್ನು ಮತ್ತು ವಾಹನ್ ಸೇವೆಯ ಒಟ್ಟು 16 ಸೇವೆಗಳನ್ನು ಒಟ್ಟಾರೆ 30 ಸೇವೆಗಳನ್ನು ನಾಗರೀಕರಿಗೆ ಕಛೇರಿಗೆ ಭೇಟಿ ನೀಡದೆ ತಾವಿರುವ ಸ್ಥಳಗಳಿಂದನೇ ಸಂಪರ್ಕರಹಿತವಾಗಿ ಒದಗಿಸಲು ಕ್ರಮಕೈಗೊಳ್ಳಲಾಗಿದೆ.

**ಸಾರಥಿ ಆನ್‌ಲೈನ್ ಸೇವೆಗಳ ವಿವರ**

ಕರ್ನಾಟಕ ರಾಜ್ಯದಲ್ಲಿ ಕಲಿಕಾ / ಚಾಲನಾ ಅನುಜ್ಞಾ ಪತ್ರ ಸೇವೆಗಳಿಗೆ ಸಂಬಂದಿಸಿದಂತೆ ಕೆಳಕಂಡ 14 ಸಾರಥಿ ಸೇವೆಗಳನ್ನು ಈಗಾಗಲೇ ಆಧಾರ್ ದೃಡೀಕರಣ ಬಳಸಿಕೊಂಡು ಆನ್ಲೈನ್ ಮೂಲಕ ಸೇವೆಗಳನ್ನು ನಾಗರೀಕರಿಗೆ ಒದಗಿಸಲಾಗುತ್ತಿದೆ.

**ಸಾರಥಿ ಸೇವೆಗಳ ಪಟ್ಟಿ**

**ಕಾಂಟಾಕ್ಟ್‌ಲೆಸ್ ಸೇವೆಗಳು**

| ಕ್ರ. ಸಂ | ಸೇವೆಗಳ ಹೆಸರು |
|---|---|
| 1 | ಕಲಿಕಾ ಚಾಲನಾ ಅನುಜ್ಞಾ ಪತ್ರ |
| 2 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 3 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 4 | ನಕಲು ಕಲಿಕಾ ಚಾಲನಾ ಅನುಜ್ಞಾ ಪತ್ರ |
| 5 | ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 6 | ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 7 | ನಕಲು ಚಾಲನಾ ಅನುಜ್ಞಾ ಪತ್ರ |
| 8 | ಚಾಲನಾ ಅನುಜ್ಞಾ ಪತ್ರ ನವೀಕರಣ |
| 9 | ಅಂತರರಾಷ್ಟ್ರೀಯ ಚಾಲನಾ ಪರವಾನಗಿ ನೀಡುವಿಕೆ |
| 10 | ಚಾಲನಾ ಅನುಜ್ಞಾ ಪತ್ರ ವಹಿ |
| 11 | ಬ್ಯಾಡ್ಜ್ ನೊಂದಿಗೆ ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನೀಡಿಕೆ |
| 12 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನವೀಕರಣ |
| 13 | ನಕಲು ನಿರ್ವಾಹಕ ಚಾಲನಾ ಅನುಜ್ಞಾ ಪತ್ರ |
| 14 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 15 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |

## ನಾನ್-ಕಾಂಟಾಕ್ಟ್‌ಲೆಸ್ ಸೇವೆಗಳು

| ಕ್ರ. ಸಂ | ಸೇವೆಗಳ ಹೆಸರು |
|---|---|
| 1 | ಹೊಸ ಚಾಲನಾ ಅನುಜ್ಞಾ ಪತ್ರ |
| 2 | ಹೊರದೇಶದವರಿಗೆ / ರಕ್ಷಣಾ ಇಲಾಖೆಯವರಿಗೆ ಹೊಸ ಚಾಲನಾ ಅನುಜ್ಞಾ ಪತ್ರ |
| 3 | ಚಾಲನಾ ಅನುಜ್ಞಾ ಪತ್ರದಲ್ಲಿ ಹೊಸ ವಾಹನ ವರ್ಗ ಸೇರ್ಪಡೆ |
| 4 | ರಕ್ಷಣಾ ಇಲಾಖೆಯವರು ಹೊಂದಿರುವ ಚಾಲನಾ ಅನುಜ್ಞಾ ಪತ್ರದಲ್ಲಿ ಹೊಸ ವಾಹನ ವಗಳ ಸೇರ್ಪಡೆ |
| 5 | ಅವಧಿ ಮೀರಿದ ಚಾಲನಾ ಅನುಜ್ಞಾ ಪತ್ರದ ನವೀಕರಣ |
| 6 | ಬದಲಿ ಚಾಲನಾ ಅನುಜ್ಞಾ ಪತ್ರ |
| 7 | ಚಾಲಕರಿಗೆ ಸಾರ್ವಜನಿಕ ಸೇವಾ ವಾಹನ ಬ್ಯಾಡ್ಜ್ ವಿತರಣೆ |
| 8 | ಚಾಲನಾ ಅನುಜ್ಞಾ ಪತ್ರದಲ್ಲಿನ ಛಾಯಾಚಿತ್ರ ಮತ್ತು ಸಹಿಗಳ ಬದಲಾವಣೆ |
| 9 | ಚಾಲನಾ ಅನುಜ್ಞಾ ಪತ್ರಗಳನ್ನು ಒಂದುಗೂಡಿಸುವುದು |
| 10 | ಅಪಾಯಕಾರಿ ವಸ್ತುಗಳನ್ನು ಸಾಗಿಸುವ ವಾಹನಗಳನ್ನು ಓಡಿಸಲು ಚಾಲನಾ ಅನುಜ್ಞಾ ಪತ್ರದಲ್ಲಿ ಹಿಂಬರಹ ನೀಡುವಿಕೆ |
| 11 | ಗುಡ್ಡಗಾಡು / ಬೆಟ್ಟದ ಪ್ರದೇಶದಲ್ಲಿ ವಾಹನಗಳನ್ನು ಓಡಿಸಲು ಚಾಲನಾ ಅನುಜ್ಞಾ ಪತ್ರದಲ್ಲಿ ಹಿಂಬರಹ ನೀಡುವಿಕೆ |
| 12 | ಚಾಲನಾ ಅನುಜ್ಞಾ ಪತ್ರದಲ್ಲಿನ ವಾಹನ ವರ್ಗವನ್ನು ಸರೆಂಡರ್ ಮಾಡುವುದು |
| 13 | ಹೊಸ ವಾಹನ ಚಾಲನಾ ತರಬೇತಿ ಶಾಲೆ ತೆರೆಯಲು ಅನುಜ್ಞಾ ಪತ್ರ |
| 14 | ನಕಲು ವಾಹನ ಚಾಲನಾ ತರಬೇತಿ ಶಾಲೆ ಅನುಜ್ಞಾ ಪತ್ರ |
| 15 | ವಾಹನ ಚಾಲನಾ ತರಬೇತಿ ಶಾಲೆಯ ಅನುಜ್ಞಾ ಪತ್ರ ನವೀಕರಣ |
| 16 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ಬಯೋಮೆಟ್ರಿಕ್ ಬದಲಾವಣೆ |

## ವಾಹನ್ ಆನ್ಲೈನ್ ಸೇವೆಗಳ ವಿವರ

ಕರ್ನಾಟಕ ರಾಜ್ಯದಲ್ಲಿ ವಾಹನ ನೋಂದಣಿ ಪ್ರಮಾಣಪತ್ರ ಸೇವೆಗಳಿಗೆ ಸಂಬಂಧಿಸಿದಂತೆ ಕೆಳಕಂಡ 16 ವಾಹನ್ ಸೇವೆಗಳನ್ನು ಈಗಾಗಲೇ ಆಧಾರ್ ದೃಢೀಕರಣ ಬಳಸಿಕೊಂಡು ಆನ್ಲೈನ್ ಮೂಲಕ ಸೇವೆಗಳನ್ನು ನಾಗರೀಕರಿಗೆ ಒದಗಿಸಲಾಗುತ್ತಿದೆ.

## ವಾಹನ್ ಸೇವೆಗಳ ಪಟ್ಟಿ

| ಕ್ರ. ಸಂ | ಕಾಂಟಾಕ್ಟ್‌ಲೆಸ್ ಸೇವೆಗಳು |
|---|---|
| 1 | ವಾಹನದ (ಫುಲ್ಲಿ ಬಿಲ್ಟ್) ಹೊಸ ನೋಂದಣಿಗೆ ಅರ್ಜಿ |
| 2 | ಮೋಟಾರು ವಾಹನ ತೆರಿಗೆ |
| 3 | ವಾಹನದ 'ಬಿ' ವಹಿ |
| 4 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳಿಗೆ ಹೊಸ ರಹದಾರಿ ನೀಡಿಕೆ |
| 5 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳ ರಹದಾರಿ ನವೀಕರಣ |
| 6 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳ ನಕಲು ರಹದಾರಿ |
| 7 | ಪ್ರಯಾಣಿಕರ ವಾಹನಗಳಿಗೆ ವಿಶೇಷ ರಹದಾರಿ ನೀಡಿಕೆ |
| 8 | ಸರಕು ಸಾಗಣೆ ವಾಹನಗಳಿಗೆ ತಾತ್ಕಾಲಿಕ ರಹದಾರಿ ನೀಡಿಕೆ |
| 9 | ರಹದಾರಿ ಅಧ್ಯರ್ಪಣೆ / ರದ್ದತಿ |

## ನಾನ್-ಕಾಂಟಾಕ್ಟ್‌ಲೆಸ್ ಸೇವೆಗಳು

| ಕ್ರ. ಸಂ | ಸೇವೆಗಳ ಹೆಸರು |
|---|---|
| 1 | ಟ್ರೇಡ್ ಸರ್ಟಿಫಿಕೇಟ್ ನೀಡಿಕೆ |
| 2 | ಟ್ರೇಡ್ ಸರ್ಟಿಫಿಕೇಟ್ ನವೀಕರಣ |
| 3 | ಟ್ರೇಡ್ ಸರ್ಟಿಫಿಕೇಟ್ ನಲ್ಲಿ ಹೆಚ್ಚುವರಿ ಟ್ರೇಡ್ ಸರ್ಟಿಫಿಕೇಟ್ ಸೇರ್ಪಡೆಗೆ ಹಿಂಬರಹ |
| 4 | ಟ್ರೇಡ್ ಸರ್ಟಿಫಿಕೇಟ್ ನಲ್ಲಿ ಹೆಚ್ಚುವರಿ ವಾಹನ ವರ್ಗ ಸೇರ್ಪಡೆ |
| 5 | ಅರ್ಹತಾ ಪ್ರಮಾಣಪತ್ರ ನೀಡಿಕೆ |
| 6 | ನಕಲು ಅರ್ಹತಾ ಪ್ರಮಾಣಪತ್ರ ನೀಡಿಕೆ |
| 7 | ನೋಂದಣಿ ಪ್ರಮಾಣಪತ್ರ ನವೀಕರಣ |
| 8 | ಹೊರರಾಜ್ಯದ ವಾಹನಗಳಿಗೆ ಕರ್ನಾಟಕ ರಾಜ್ಯದ ನೋಂದಣಿ ಸಂಖ್ಯೆ ನೀಡಿಕೆ |
| 9 | ಮೋಟಾರು ವಾಹನದಲ್ಲಿ ಬದಲಾವಣೆ |
| 10 | ವಾಹನ ನೋಂದಣಿ ಪ್ರಮಾಣಪತ್ರ ಅಧ್ಯರ್ಪಣೆ |
| 11 | ಕಂತು-ಕರಾರು ರದ್ಧತಿ |
| 12 | ಮ್ಯಾಕ್ಸಿಕ್ಯಾಬ್ ವಾಹನಗಳಿಗೆ ಕಾಂಟ್ರಾಕ್ಟ್ ಕ್ಯಾರೇಜ್ ರಹದಾರಿ ನೀಡಿಕೆ |

ಬೆಂಗಳೂರು (ನಗರ) ವಿಭಾಗ, ಬೆಂಗಳೂರು ಗ್ರಾಮಾಂತರ ವಿಭಾಗ, ಕಲಬುರಗಿ ವಿಭಾಗ, ಬೆಳಗಾವಿ ವಿಭಾಗ, ಮೈಸೂರು ವಿಭಾಗ, ಶಿವಮೊಗ್ಗ ವಿಭಾಗ ಒಳಗೊಂಡಂತೆ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ದೈನಂದಿನ ಕಡತಗಳನ್ನು ಇ-ಆಫೀಸ್ ಮೂಲಕ ನಿರ್ವಹಿಸುತ್ತಿದ್ದು, ಸಾರಿಗೆ ಇಲಾಖೆಯಲ್ಲಿ ಇ-ಆಫೀಸ್ (E-Office) ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಅನುಬಂಧ-3

## ನಾಲ್ಕು ನಿಗಮಗಳಿಂದ ಸಾರಿಗೆ ಸೇವೆಗಳನ್ನು ಪರಿಣಾಮಕಾರಿಗೊಳಿಸಲು ಮತ್ತು ಸ್ನೇಹಮಯಿಗೊಳಿಸಲು ಕೈಗೊಂಡಿರುವ ಕ್ರಮಗಳ ವಿವರ:

### ಕ.ರಾ.ರ.ಸಾ. ನಿಗಮ

- ಕ.ರಾ.ರ.ಸಾ. ನಿಗಮದ ವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧ ಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್, ಅಂಬಾರಿ ಉತ್ಸವ, ಇವಿ ಪವರ್ ಪ್ಲಸ್ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ನಿಗಮವು ಒಟ್ಟು14 ನಗರಗಳಲ್ಲಿಅಂದರೆ ತುಮಕೂರು, ಮೈಸೂರು, ಹಾಸನ, ಮಂಡ್ಯ, ರಾಮನಗರ, ಮಂಗಳೂರು, ಉಡುಪಿ, ಕೋಲಾರ, ಕೆ.ಜಿ.ಎಫ್., ದಾವಣಗೆರೆ, ಶಿವಮೊಗ್ಗ, ಭದ್ರಾವತಿ, ಚಿತ್ರದುರ್ಗ, ಮತ್ತು ಚಿಕ್ಕಮಗಳೂರು ನಗರಗಳಲ್ಲಿ ನಗರ ಸಾರಿಗೆಗಳನ್ನು ನಗರ ಮತ್ತು ಹೊರವಲಯಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಕ.ರಾ.ರ.ಸಾ ನಿಗಮವು ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಸ್ಮಾರ್ಟ್ ಇ.ಟಿ.ಎಂ(Electronic Ticketing Machine)ಜಾರಿಗೆ ತಂದಿರುತ್ತದೆ. ಸದರಿ ಇ.ಟಿ.ಎಂ.ಗಳಲ್ಲಿ Dynamic QR ಆಧಾರಿತ UPI ಹಣ ಪಾವತಿಯನ್ನು ಜಾರಿಗೊಳಿಸಲಾಗಿದ್ದು, ಪ್ರಯಾಣಿಕರು ಹಣರಹಿತವಾಗಿ (Cashless) UPI ಮೂಲಕ ಹಣ ಪಾವತಿ ಮಾಡಿ ಟಿಕೆಟ್ ಪಡೆದು ಪ್ರಯಾಣಿಸಬಹುದಾಗಿದೆ.
- ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರು, ಮಂಗಳೂರು-ಉಡುಪಿ-ಕುಂದಾಪುರ, ಕುಶಾಲನಗರ-ಮಡಿಕೇರಿ, ದಾವಣಗೆರೆಗೆ ನೇರ ಸಂಪರ್ಕ ಕಲ್ಪಿಸಲು "Fly bus" ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸದರಿ ಯೋಜನೆಯಲ್ಲಿ ಡಿಜಿಟಲ್ ಹಣ ಪಾವತಿಯನ್ನು ಸಕ್ರಿಯೆಗೊಳಿಸಲಾಗಿದೆ.
- ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return) ಪ್ರಯಾಣಕ್ಕೆ ಶೇ.10ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.
- ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್‌ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ- ಬುಕಿಂಗ್‌ಮತ್ತುಇ- ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ ಹಾಗೂ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಆಪ್ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸದರಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಎಲ್ಲಾ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಮೂಲಕ ಹಣ ಪಾವತಿಸಲು ಅವಕಾಶ ಕಲ್ಪಿಸಿದ್ದು, ಈ ಸಂಬಂಧ ತಗಲುವ ಗೇಟ್‌ವೇ ಶುಲ್ಕವನ್ನು ಪ್ರಯಾಣಿಕರಿಂದ ಪಡೆಯುತ್ತಿರುವುದಿಲ್ಲ.

- ಕೌಂಟರ್‌ಗಳ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸಿರುವ ಟಿಕೆಟ್‌ಗಳಿಗೆ ಪ್ರಯಾಣವನ್ನು ಮುಂದೂಡುವ ಮತ್ತು ಹಿಂದೂಡು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಒಂಟಿಯಾಗಿ ಪ್ರಯಾಣ ಮಾಡುವ ಮಹಿಳೆಯರಿಗಾಗಿ, ಮಹಿಳೆಯರು ಮಾತ್ರ ಕಾಯ್ದಿರಿಸಬಹುದಾದ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ.
- ನಿಗಮದ ಸಾರಿಗೆಗಳಲ್ಲಿ ಮುಂಗಡ ಕಾಯ್ದಿರಿಸಿರುವ ಪ್ರಯಾಣಿಕರಿಗೆ ಪ್ರಯಾಣ ವೇಳೆಯ ಎರಡು ಗಂಟೆಯ ಮುಂಚಿತವಾಗಿ ನಗರ ಸಾರಿಗೆಗಳಿರುವ ನಗರಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
- ಮುಂಗಡವಾಗಿ ಸೀಟು ಕಾಯ್ದಿರಿಸುವ ಪ್ರಯಾಣಿಕರಿಗೆ ಅವರುಗಳು ಪ್ರಯಾಣ ಮಾಡುವ ವಾಹನಸಂಖ್ಯೆ, ನಿರ್ಗಮನದ ಸಮಯ ಹಾಗೂ ಸದರಿ ವಾಹನದಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಯ ಮೊಬೈಲ್ ಸಂಖ್ಯೆಗಳನ್ನು ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.
- ಪ್ರಯಾಣಿಕರ ಅನುಕೂಲಕ್ಕಾಗಿ ಆನ್‌ಲೈನ್ ಅಥವಾ ಮೊಬೈಲ್ ಮೂಲಕ ಟಿಕೆಟ್ ಕಾಯ್ದಿರಿಸಿ, ಎಂ-ಟಿಕೆಟನ್ನು ಲ್ಯಾಪ್‌ಟಾಪ್/ಐಪ್ಯಾಡ್/ಟ್ಯಾಬ್ಲೆಟ್ ಅಥವಾ ಮೊಬೈಲ್ ಫೋನ್‌ನಲ್ಲಿ ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 111 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
- ಪ್ರಯಾಣಿಕರ ಕಣ್ಗಾವಲಿಗಾಗಿ ನಿಗಮದ 50 ಬಸ್ಸುಗಳಲ್ಲಿ ಈಗಾಗಲೇ Saloon Camera ಸಾಧನಗಳನ್ನು ಅಳವಡಿಸಲಾಗಿರುತ್ತದೆ.
- 1723 ಬಸ್ಸುಗಳಲ್ಲಿ VLT & Panic Buttonಗಳನ್ನು ಅಳವಡಿಸಲಾಗಿದ್ದು, 1108 ಬಸ್ಸುಗಳಲ್ಲಿ ಡ್ಯಾಶ್ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ.
- ಮುಂಬರುವ ದಿನಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಎಲ್ಲಾ ಬಸ್‌ಗಳಲ್ಲಿ ವೆಹಿಕಲ್ ಟ್ರಾಕಿಂಗ್‌ಅಳವಡಿಸಲು ಉದ್ದೇಶಿಸಲಾಗಿದೆ.

**ಬೆಂ.ಮ.ಸಾ.ಸಂಸ್ಥೆ**

ಬೆಂ.ಮ.ಸಾ. ಸಂಸ್ಥೆಯು ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಪರಿಣಾಮಕಾರಿಗೊಳಿಸಲು ಮತ್ತು ಸ್ನೇಹಮಯಿಗೊಳಿಸಲು ಈ ಕೆಳಕಂಡ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

**ಅ)** ಮಹಿಳಾ ಸುರಕ್ಷತೆಯ ವೈಶಿಷ್ಟ್ಯತೆಯನ್ನು ಹೊಂದಿರುವ 'ನಮ್ಮ ಬಿಎಂಟಿಸಿ ಮೊಬೈಲ್ ಆಪ್‌ಅನ್ನು ಅಭಿವೃದ್ಧಿಪಡಿಸಿರುತ್ತದೆ. ಇದರಿಂದ ಪ್ರಯಾಣಿಕರು ಮೊದಲೇ ತಮ್ಮ ಪ್ರಯಾಣವನ್ನು ಯೋಜಿಸಬಹುದಾಗಿದ್ದು, ಬಸ್ಸ್ ನಿಲ್ದಾಣಗಳಲ್ಲಿ ಕಾಯುವಿಕೆಯನ್ನು ತಡೆಗಟ್ಟಬಹುದಾಗಿರುತ್ತದೆ. ಮೊಬೈಲ್ ಆಪ್‌ನ ವೈಶಿಷ್ಟ್ಯತೆಯು ಈ ಕೆಳಕಂಡಂತಿವೆ.

- ಆಪ್‌ನಲ್ಲಿ ಎಸ್‌ಓಎಸ್ ವೈಶಿಷ್ಟ್ಯತೆಯಿದ್ದು, ತುರ್ತು ಸಂದರ್ಭದಲ್ಲಿ ಸದರಿ ವೈಶಿಷ್ಟ್ಯತೆಯನ್ನು ಬಳಸಬಹುದಾಗಿರುತ್ತದೆ.
- ಪ್ರಯಾಣ ಯೋಜಕ (Journey Planner),
- ಹತ್ತಿರದ ಬಸ್ ನಿಲುಗಡೆ/ನಿಲ್ದಾಣದ ಮಾಹಿತಿ,
- ಮಾರ್ಗ,
- ದರ ವಿವರ,
- ವಾಹನ/ ಮಾರ್ಗದ ಟ್ರಾಕಿಂಗ್,
- ಬಸ್ ನಿಲುಗಡೆಗೆ ಬಸ್ಸಿನ ಆಗಮನದ ಅಂದಾಜು ಸಮಯ (ETA) ಹಾಗೂ ಪ್ರಯಾಣಿಕರು ತಲುಪಬೇಕಿರುವ ಸ್ಥಳಕ್ಕೆ ಆಗಮನದ ಅಂದಾಜು ಸಮಯ (ETD)

**ಆ)** ಸಂಸ್ಥೆಯ ಬಸ್ಸುಗಳಲ್ಲಿ ಸಿಸಿಟಿವಿ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಇದು ಬಸ್ಸಿನಲ್ಲಿ ನಡೆದ ಯಾವುದೇ ಅನಿರೀಕ್ಷಿತ/ ಅನುಚಿತ ಘಟನೆಯನ್ನು ತಿಳಿಯುವಲ್ಲಿ ಸಹಾಯ ಮಾಡುತ್ತವೆ.

**ಇ)** ಸಂಸ್ಥೆಯ ಎಲ್ಲಾ ಬಸ್ಸುಗಳಲ್ಲಿ ಆಟೋಮ್ಯಾಟಿಕ್ ಟ್ರಾಕಿಂಗ್ ಯಂತ್ರಗಳು ಹಾಗೂ ಪ್ಯಾನಿಕ್ ಬಟನ್ ಅನ್ನು ಅಳವಡಿಸಲಾಗಿದ್ದು, ಇದರಿಂದ ನೈಜ ಸಮಯದಲ್ಲಿ ವಾಹನಗಳ ವಿವರವನ್ನು ಪ್ರಯಾಣಿಕರು ಪಡೆಯಬಹುದಾಗಿರುವುದಲ್ಲದೇ, ಕಾರ್ಯಾಚರಣೆಯನ್ನು ಮೇಲ್ವಿಚಾರಣೆ ಮಾಡಬಹುದಾಗಿದ್ದು, ಇದರಿಂದ ಕಾರ್ಯಾಚರಣೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸಹಾಯಕವಾಗಿದೆ. ಅಲ್ಲದೆ, ಬಸ್ಸುಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆದಲ್ಲಿ, ಬಸ್ಸುಗಳಲ್ಲಿ ಅಳವಡಿಸಿರುವ ಪ್ಯಾನಿಕ್ ಬಟನ್ ಅನ್ನು ಬಳಸಬಹುದಾಗಿದ್ದು, ಸದರಿ ವೈಶಿಷ್ಟ್ಯತೆಯು ಸಾರಥಿ ವಾಹನಗಳಿಗೆ ಸಂಕೇತಗಳನ್ನು ಕಳುಹಿಸುತ್ತದೆ. ಇದರಿಂದ ಸಾರಥಿಯು ಜಿಪಿಎಸ್ ವೈಶಿಷ್ಟ್ಯತೆಯನ್ನು ಬಳಸಿಕೊಂಡು ವ್ಯಕ್ತಿಯನ್ನು ತಲುಪಬಹುದಾಗಿರುತ್ತದೆ

**ಈ)** ಬಸ್ ನಿಲುಗಡೆ/ ನಿಲ್ದಾಣಗಳಲ್ಲಿ 500 ಪ್ರಯಾಣಿಕರ ಮಾಹಿತಿ ವ್ಯವಸ್ಥೆ (ಪಿಐಎಸ್) ಪ್ರದರ್ಶಕಗಳನ್ನು ಅನುಷ್ಠಾನಗೊಳಿಸಿದ್ದು, ಇದರಿಂದ ಪ್ರಯಾಣಿಕರು ನಿರ್ದಿಷ್ಟ ಬಸ್ ನಿಲ್ದಾಣಗಳಿಂದ ವಿವಿಧ ಬಸ್ ನಿಲ್ದಾಣಗಳಿಗೆ ಹೋಗಲು, ಸದರಿ ಬಸ್ ನಿಲ್ದಾಣಕ್ಕೆ ಬರುವ ಬಸ್ಸುಗಳ 'ಅಂದಾಜು ಆಗಮನದ ಸಮಯವನ್ನು (Estimated Time of Arrival ETA) ತಿಳಿಯಲು ಸಹಾಯಕವಾಗಿರುತ್ತದೆ.

**ಉ) ಕ್ಯೂಆರ್ ಆಧಾರಿತ ಯುಪಿಐ ಪಾವತಿ ವ್ಯವಸ್ಥೆ:**
ಸಾರ್ವಜನಿಕ ಪ್ರಯಾಣಿಕರು ಬಸ್ಸುಗಳಲ್ಲಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಯುಪಿಐ ಮೂಲಕ ಹಣ ಪಾವತಿ ಮಾಡಿ ಚೀಟಿ ಪಡೆದುಕೊಳ್ಳುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಯಿಂದಾಗಿ ಪ್ರಯಾಣಿಕರಿಗೆ ನಗದುರಹಿತ ವ್ಯವಸ್ಥೆಯನ್ನು ಕಲ್ಪಿಸುವುದರೊಂದಿಗೆ ಚಿಲ್ಲರೆ ಅಭಾವದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಹಾಯಕವಾಗಿರುತ್ತದೆ.

**ಊ) ಡಿಜಿಟಲ್/ ಮೊಬೈಲ್ ಪಾಸು ವ್ಯವಸ್ಥೆ:**
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು, ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ದೈನಿಕ, ಸಾಪ್ತಾಹಿಕ ಹಾಗೂ ಮಾಸಿಕ ಪಾಸುಗಳನ್ನು ವಿತರಣೆ ಮಾಡುತ್ತಿದೆ. ಮುಂದುವರೆದು, ಪ್ರಯಾಣಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸದರಿ ದೈನಿಕ, ಸಾಪ್ತಾಹಿಕ ಹಾಗೂ ಮಾಸಿಕ ಪಾಸುಗಳನ್ನು ಡಿಜಿಟಲ್ ವ್ಯವಸ್ಥೆಯಲ್ಲಿ ಮೊಬೈಲ್ ಆಪ್ ಮುಖಾಂತರ ವಿತರಿಸಲಾಗುತ್ತಿದೆ. ಈ ವ್ಯವಸ್ಥೆಯಿಂದಾಗಿ ಪ್ರಯಾಣಿಕರು ಸರತಿ ಸಾಲುಗಳಲ್ಲಿ ನಿಂತು ಪಾಸುಗಳನ್ನು ಖರೀದಿಸುವ ಅವಶ್ಯಕತೆ ಇರುವುದಿಲ್ಲ ಹಾಗೂ ನಗದು ರಹಿತ ವ್ಯವಸ್ಥೆಯಾಗಿರುವ ನಿಟ್ಟಿನಲ್ಲಿ ಚಿಲ್ಲರೆ ಸಮಸ್ಯೆ ಬಾರದಿರುವುದು ಪ್ರಯಾಣಿಕರಿಗೆ ತುಂಬಾ ಅನುಕೂಲಕರವಾಗಿರುತ್ತದೆ.

**ವಾ.ಕ.ರ.ಸಾ. ಸಂಸ್ಥೆ**

1. **ಇ-ಆಫೀಸ್:** ಕರ್ನಾಟಕ ಸರ್ಕಾರವು ರಾಜ್ಯ ಮಟ್ಟದ ಎಲ್ಲಾ ಇಲಾಖೆಗಳಲ್ಲಿ ಇ-ಆಫೀಸ್ ಅನ್ನು ಕಡ್ಡಾಯವಾಗಿ ಜಾರಿಗೆ ತರಲು ಆದೇಶಿಸಿದ್ದು, ಅದರಂತೆ, ವಾ.ಕ.ರ.ಸಾ. ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಇ-ಆಫೀಸನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿದೆ.
2. **ಗಣಕೀಕೃತ ಕುಂದುಕೊರತೆ ನಿರ್ವಹಣಾ ವ್ಯವಸ್ಥೆ(ಸಾರಿಗೆ ಸ್ಪಂದನ)** : ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ದೂರು ದಾಖಲಿಸಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಆನಲೈನ ಆಧಾರಿತ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ನೌಕರರು ಮತ್ತು ಪ್ರಯಾಣಿಕರು ವೆಬ್ ಪೋರ್ಟಲ್ ಅಥವಾ ಮೊಬೈಲ್ ಅಪ್ಲಿಕೇಶನ್ ಮೂಲಕ ದೂರುಗಳನ್ನು ದಾಖಲಿಸಬಹುದಾಗಿದೆ. ದೂರುಗಳ ಬಗ್ಗೆ ಪರಿಶೀಲಿಸಲು ಕೇಂದ್ರ ಕಛೇರಿಯಲ್ಲಿ ಓರ್ವ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದ್ದು, ದೂರುಗಳನ್ನು ಸಮಯಕ್ಕೆ ಸರಿಯಾಗಿ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.
3. **ಕೇಂದ್ರೀಕೃತ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ** : ಸಂಸ್ಥೆಯ ಕೇಂದ್ರ ಕಛೇರಿ, ಎಲ್ಲಾ ವಿಭಾಗೀಯ ಕಛೇರಿಗಳು, ಪ್ರಾದೇಶಿಕ ಕಾರ್ಯಾಗಾರ ಮತ್ತು ಪ್ರಾದೇಶಿಕ ತರಬೇತಿ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು

ಜಾರಿಗೊಳಿಸಲಾಗಿದೆ. ಇದು ಕೇಂದ್ರೀಕೃತ ವ್ಯವಸ್ಥೆಯಾಗಿದ್ದು, ಎಲ್ಲಾ ಯುನಿಟ್‌ಗಳಲ್ಲಿಯ ಹಾಜರಾತಿ ವಿವರಗಳನ್ನು ಕೇಂದ್ರ ಕಛೇರಿಯಲ್ಲಿಯೇ ಪರಿಶೀಲಿಸಬಹುದಾಗಿದೆ.

4. ಸಾರಿಗೆ ಸಂಜೀವಿನಿ : ನೌಕರರು ಮತ್ತು ಅವರ ಅವಲಂಬಿತರಿಗೆ ನಗದುರಹಿತ ಚಿಕಿತ್ಸಾ ಸೌಲಭ್ಯವನ್ನು **(Cashless)** ಒದಗಿಸುವ ನಿಟ್ಟಿನಲ್ಲಿ **KIMS Hubli, GIMS - Gadag, KRIMS - Karwar, BIMS - Belgavi** ಮತ್ತು **HIMS - Haveri** ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿ**ರುತ್ತದೆ.** ನೌಕರರು ಮತ್ತು ಅವರ ಅವಲಂಬಿತರು ಒಳರೋಗಿಯಾಗಿ ದಾಖಲಾಗುವುದರಿಂದ ಹಿಡಿದು ಚಿಕಿತ್ಸಾ ವೆಚ್ಚಗಳನ್ನು ಇತ್ಯರ್ಥಪಡಿಸುವವರೆಗೆ ಎಲ್ಲಾ ಪ್ರಕ್ರಿಯೆಗಳನ್ನು ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.
5. **BI (Business Intelligence)** ಡ್ಯಾಶಬೋರ್ಡ: ಘಟಕಗಳ ದೈನಂದಿನ ಕಾರ್ಯಾಚರಣೆಯನ್ನು ಪ್ರತಿ ದಿನ ವಿಭಾಗೀಯ ನಿಯಂತ್ರಣಾಧಿಕಾರಿಗಳು **ಹಾಗೂ** ಎಲ್ಲಾ ಇಲಾಖಾ ಮುಖ್ಯಸ್ಥರು ಪರಿಶೀಲಿಸಲು ಅನುಕೂಲವಾಗುವಂತೆ **BI (Business Intelligence)** ಡ್ಯಾಶಬೋರ್ಡ ಅನ್ನು ಅಭಿವೃದ್ಧಿಪಡಿ**ಸಿ** ಕಾರ್ಯಗತಗೊಳಿಸಲಾಗಿದೆ. ಘಟಕ **ಹಾಗೂ** ವಿಭಾಗಗಳ **ದೈನಂದಿನ ಕಾರ್ಯಾಚರಣೆಯ** ಅಂಕಿ-ಅಂಶಗ**ಳು** ಡ್ಯಾಶ್‌ಬೋರ್ಡ್‌ನಲ್ಲಿ ಲಭ್ಯವಾಗಲಿದೆ.
6. ಸಿಬ್ಬಂದಿಗಳ ಸ್ಥಳ ನಿಯೋಜನೆ ತಂತ್ರಾಂಶ : ಹೊಸದಾಗಿ ನೇಮಕವಾದ ಚಾಲನಾ ಹಾಗೂ ಇತರೇ ಸಿಬ್ಬಂದಿಗಳಿಗೆ ಅವರುಗಳು ಇಚ್ಛಿಸಿದ ಸ್ಥಳಕ್ಕೆ ಖಾಲಿ ಹುದ್ದೆಯ ಲಭ್ಯತೆಗೆ ಅನುಗುಣವಾಗಿ ಕೌನ್ಸೆಲಿಂಗ್ ಮೂಲಕ ನಿಯೋಜಿಸಲು ಅವಶ್ಯವಿರುವ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಸಂಪೂರ್ಣ ಪಾರದರ್ಶಕವಾಗಿರುವ ಈ ವ್ಯವಸ್ಥೆಯ ಮೂಲಕ ಸಿಬ್ಬಂದಿಗಳು ಯಾವುದೇ ಬಾಹ್ಯ ಒತ್ತಡಕ್ಕೆ ಒಳಗಾಗದೇ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಅದೇ ರೀತಿ ವರ್ಗಾವಣೆಯಾಗುವ ಸಿಬ್ಬಂದಿಗಳಿಗೆ ಹಾಗೂ ಬಡ್ತಿ ಹೊಂದಿದ ಸಿಬ್ಬಂದಿಗಳಿಗೂ ಸಹ ಇದೇ ತಂತ್ರಾಂಶದ ಮೂಲಕ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.
7. ಯು.ಪಿ.ಐ. **ಪಾವತಿ** ವ್ಯವಸ್ಥೆ : ನಗದು ರಹಿತ ವಹಿವಾಟುಗಳನ್ನು ಉತ್ತೇಜಿಸಲು ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ವಾಕರಸಾಸಂಸ್ಥೆಯಲ್ಲಿ PhonePe ಕಂಪನಿಯ ಸಹಯೋಗದೊಂದಿಗೆ ಎಲ್ಲಾ ಬಸ್ಸುಗಳಲ್ಲಿ UPI ಮೂಲಕ ಹಣ ಸ್ವೀಕೃತಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಪ್ರಯಾಣಿಕರು ನಿರ್ವಾಹಕರ ಬಳಿ ಇರುವ QR Code Scan ಮಾಡುವ ಮೂಲಕ ಟಿಕೇಟ್ ಮೊತ್ತ ಪಾವತಿಸಬಹುದಾಗಿದೆ. ಚಿಲ್ಲರೆ ಸಮಸ್ಯೆ ಪರಿಹಾರ, ನಗದು ರಹಿತ ಪ್ರಯಾಣ, ಸಮಯ ಉಳಿತಾಯವಾಗಲಿದೆ. ಪ್ರತಿ ದಿನ ಸರಾಸರಿ 24000 **ವಹಿವಾಟು**ಗಳಿಂದ ಸುಮಾರು ರೂ. 25 ಲಕ್ಷ **ಆದಾಯವು** UPI ಮೂಲಕ ಸಂಗ್ರಹವಾಗುತ್ತಿದ್ದು, **ಇದು**ವರೆಗೆ ರೂ. 200 ಕೋಟಿ**ಗೂ** ಹೆಚ್ಚು ಆದಾಯ**ವು** UPI ಮೂಲಕ ಸಂಗ್ರಹವಾಗಿದೆ.
8. ಜಾಲತಾಣ (ವೆಬ್ ಸೈಟ್) : ಸಂಸ್ಥೆಯು ತನ್ನದೇ ಆದ **www.nwkrtc.karnataka.gov.in** ಎಂಬ ಅಧಿಕೃತ ಜಾಲತಾಣವನ್ನು ಹೊಂದಿರುತ್ತದೆ. ಸಂಸ್ಥೆಯ ಸಂಪೂರ್ಣ ಮಾಹಿತಿ, ಬಸ್ ನಿಲ್ದಾಣಗಳು, ಮುಂಗಡ ಟಿಕೇಟ್ ಕಾಯ್ದಿರಿಸುವಿಕೆ, ಆನಲೈನ್ ಬಸ್ ವಿಚಾರಣೆ ಮತ್ತು ಪ್ರಯಾಣಿಕರಿಗೆ ಒದಗಿಸಲಾಗುತ್ತಿರುವ ಇತರ ಸೌಲಭ್ಯಗಳ ಬಗ್ಗೆ ಮಾಹಿತಿ ಜಾಲತಾಣದಲ್ಲಿ ಲಭ್ಯವಿದೆ. ಲಭ್ಯವಿರುವ ಇತ್ತೀಚಿನ ಹೊಸ ತಂತ್ರಜ್ಞಾನಗಳೊಂದಿಗೆ ಅಧಿಕೃತ ವೆಬ್‌ಸೈಟ್ ಅನ್ನು ನವೀಕರಿಸಲಾಗಿದೆ.
9. **ಆನ್‌ಲೈನ್ ಆಧಾರಿತ ವರ್ಗಾವಣೆ ತಂತ್ರಾಂಶ** : ಸಿಬ್ಬಂದಿಗಳ ವರ್ಗಾವಣೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಆನ್‌ಲೈನ್ ವರ್ಗಾವಣೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಇದರಲ್ಲಿ ಸಿಬ್ಬಂದಿಯು ಆನ್‌ಲೈನ್ ಮೂಲಕ (ವಿಭಾಗದ ಒಳಗೆ ಅಥವಾ ಹೊರಗೆ) ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸಬಹುದು. ಸದರಿ ಅರ್ಜಿಯನ್ನು ಆಯಾ ವಿಭಾಗದ ಆಡಳಿತಾಧಿಕಾರಿಗಳು ಪರಿಶೀಲಿಸಿ,

ಶಿಫಾರಸ್ಸುಗಳೊಂದಿಗೆ ಪ್ರಮಾಣೀಕರಿಸಿದ ನಂತರ ಅರ್ಜಿಗಳನ್ನು ಕೇಂದ್ರ ಕಚೇರಿಗೆ ಅನುಮೋದನೆಗಾಗಿ ಕಳುಹಿಸಲಾಗುತ್ತದೆ.

10. **ಗಣಕೀಕೃತ ರಜೆ ನಿರ್ವಹಣಾ ವ್ಯವಸ್ಥೆ** : ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ರಜೆಯನ್ನು ಮಾನವ ಆಧಾರಿತ ಪದ್ಧತಿಯಲ್ಲಿ ನೀಡಲಾಗುತ್ತಿತ್ತು. ಇದು ಸಿಬ್ಬಂದಿಗೆ ಸಮರ್ಪಕವಾಗಿ ರಜೆ ಮಂಜೂರು ಮಾಡುವಲ್ಲಿ ಅನಾನುಕೂಲತೆಯನ್ನುಂಟು ಮಾಡುತ್ತಿದ್ದರಿಂದ, ಸಿಬ್ಬಂದಿಗಳು ಲಭ್ಯವಿರುವ ಕೋಟಾದ ಆಧಾರದ ಮೇಲೆ ತಮ್ಮ ಅಗತ್ಯಕ್ಕೆ ಅನುಗುಣವಾಗಿ ಆನ್‌ಲೈನ್‌ನಲ್ಲಿ ರಜೆ ಅರ್ಜಿಯನ್ನು ಸಲ್ಲಿಸಲು ಮತ್ತು ಸ್ವಯಂಚಾಲಿತವಾಗಿ ಮಂಜೂರಾತಿಯನ್ನು ಪಡೆಯಲು ಅನುಕೂಲವಾಗುವಂತೆ ಎಲ್ಲಾ ಘಟಕಗಳಲ್ಲಿ ಗಣಕೀಕೃತ ರಜೆ ನಿರ್ವಹಣಾ ವ್ಯವಸ್ಥೆಯನ್ನು ಮಾಹಿತಿ ತಂತ್ರಜ್ಞಾನ ಇಲಾಖೆಯು ಅಭಿವೃದ್ಧಿಪಡಿಸಿ ಕಾರ್ಯಗತಗೊಳಿಸಿದೆ. ಈ ಉಪ ಕ್ರಮವು ರಜೆ ಮಂಜೂರಾತಿಯಲ್ಲಿ ಪಾರದರ್ಶಕತೆಯನ್ನು ತರಲು ಸಹಾಯ ಮಾಡಿದೆ.
11. **e-ಉಗ್ರಾಣ (Inventory Management Systems)** : ವಿಭಾಗವಾರು ಸುಮಾರು **20000**ಕ್ಕೂ ಹೆಚ್ಚು ವಿವಿಧ ವಸ್ತುಗಳನ್ನು ಉಗ್ರಾಣ ಇಲಾಖೆಯು ನಿರ್ವಹಿಸುತ್ತಿದ್ದು, ಇದಕ್ಕೆ ಹೆಚ್ಚಿನ ಸಮಯ ಹಾಗೂ ಮಾನವ ಸಂಪನ್ಮೂಲದ ಅವಶ್ಯಕತೆ ಇರುತ್ತದೆ. ಅಲ್ಲದೇ ಮಾನವ ಆಧಾರಿತ ಪದ್ಧತಿಯಲ್ಲಿ ಲೆಕ್ಕಾಚಾರ ಮಾಡುವುದು, ವರದಿಯನ್ನು ಸಿದ್ಧಪಡಿಸುವುದು, ವಸ್ತು/ ದಾಸ್ತಾನು ನಿರ್ವಹಣೆ ಇತ್ಯಾದಿ ಕೆಲಸಗಳನ್ನು ನಿರ್ವಹಿಸುವುದು ಬಹಳ ಕ್ಲಿಷ್ಟಕರವಾಗಿರುತ್ತದೆ. ಆದ್ದರಿಂದ, ಈ ಎಲ್ಲಾ ಅನಾನುಕೂಲತೆಗಳನ್ನು ನಿವಾರಿಸಲು, ಇ-ಉಗ್ರಾಣ ತಂತ್ರಾಂಶವನ್ನು ಸಿದ್ಧಪಡಿಸಿ ಕೇಂದ್ರ ಕಛೇರಿಯ ಉಗ್ರಾಣ ಇಲಾಖೆ ಹಾಗೂ ಎಲ್ಲಾ ವಿಭಾಗೀಯ ಉಗ್ರಾಣಗಳಲ್ಲಿ ಯಶಸ್ವಿಯಾಗಿ ಅಳವಡಿಸಲಾಗಿರುತ್ತದೆ.

ರಾಜ್ಯ ಸರ್ಕಾರದ ಸಹಯೋಗದೊಂದಿಗೆ ವಾಕರಸಾಸಂಸ್ಥೆಯಲ್ಲಿ ಈ ಕೆಳಕಂಡ ಯೋಜನೆಯನ್ನು ಜಾರಿಗೊಳಿಸಲಾಗಿದೆ.

**ಆರ್.ಎಫ್.ಐ.ಡಿ. ಆಧಾರಿತ ಸ್ಮಾರ್ಟ ಕಾರ್ಡ (ಟ್ರಾವೆಲ್ ಕಾರ್ಡ) ಯೋಜನೆ :** ವಾಕರಸಾಸಂಸ್ಥೆಯಲ್ಲಿ ನಗದು ರಹಿತ ವಹಿವಾಟಿಗೆ ಉತ್ತೇಜನ ನೀಡುವ ದೃಷ್ಠಿಯಿಂದ, ಬೆಳಗಾವಿ ಮತ್ತು ಗದಗ ನಗರಗಳಲ್ಲಿ ಆರ್.ಎಫ್.ಐ.ಡಿ. ಆಧಾರಿತ ಸ್ಮಾರ್ಟ್ ಕಾರ್ಡ್ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ತಯಾರಿಸಿ, ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಗರ ಭೂ ಸಾರಿಗೆ ನಿರ್ದೇಶನಾಲಯ (DULT) ಕ್ಕೆ ಸಲ್ಲಿಸಲಾಗಿತ್ತು. ಅದರಂತೆ ನಗರ ಭೂ ಸಾರಿಗೆ ನಿರ್ದೇಶನಾಲಯವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ರೂ. 32.39 ಲಕ್ಷ ಅನುದಾನ ಮಂಜೂರು ಮಾಡಿದ್ದು, ಮೊದಲ ಕಂತಾಗಿ 15.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಸಂಸ್ಥೆಯು ಬಿಡುಗಡೆಯಾದ ಮೊತ್ತವನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದು, ಈ ಕುರಿತು ಬಳಕೆ ಪ್ರಮಾಣಪತ್ರವನ್ನು ಸಹ ಸಲ್ಲಿಸಿದೆ. ಇತ್ತೀಚೆಗೆ 'ಶಕ್ತಿ' ಯೋಜನೆಯು ಜಾರಿಗೊಂಡ ಹಿನ್ನೆಲೆಯಲ್ಲಿ, ಸದರಿ ಯೋಜನೆಯನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸುವಂತೆ ಕೋರಿ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಗರ ಭೂ ಸಾರಿಗೆ ನಿರ್ದೇಶನಾಲಯದ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಸದರಿ ಯೋಜನೆಯನ್ನು ಬೆಳಗಾವಿ ನಗರದಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗಿದೆ. ಇಲ್ಲಿಯವರೆಗೆ ಪ್ರಯಾಣಿಕರಿಗೆ 7080 ಟ್ರಾವೆಲ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದ್ದು, ರೂ. 67.82 ಲಕ್ಷ ಮೊತ್ತದ ರೀಚಾರ್ಜ್ ಮಾಡಲಾಗಿದೆ. ಇದಲ್ಲದೆ, ಟ್ರಾವೆಲ್ ಕಾರ್ಡ್ ಮುಖಾಂತರ 4.65 ಲಕ್ಷ ಟಿಕೆಟ್‌ಗಳನ್ನು ವಿತರಿಸುವ ಮೂಲಕ 66.05 ಲಕ್ಷ ರೂ. ಆದಾಯವನ್ನು ಗಳಿಸಲಾಗಿದೆ. ಅಲ್ಲದೆ, 2933 ಮಾಸಿಕ ಪಾಸ್‌ಗಳನ್ನು ಟ್ರಾವೆಲ್ ಕಾರ್ಡ್‌ಗಳ ರೂಪದಲ್ಲಿ ವಿತರಿಸಲಾಗಿದೆ.

12. ವಾಕರಸಾ ಸಂಸ್ಥೆಯಲ್ಲಿ ಕಡಿಮೆ ಹೊಗೆ ಸೂಸುವ ಒಟ್ಟು 867 ಬಿ.ಎಸ್-6 ಮಾದರಿ ಬಸ್ಸುಗಳನ್ನು ಸಂಸ್ಥೆಗೆ ಸೇರ್ಪಡೆಗೊಳಿಸಲಾಗಿರುತ್ತದೆ. ಅಲ್ಲದೇ ಅವುಗಳಲ್ಲಿ VLTD,

Panic button, CC camera, FDAS/FDSS ಹಾಗೂ 2025-26ನೇ ಸಾಲಿನಲ್ಲಿ ಇನ್ನೂ 474 ಹೊಸ ಬಿ.ಎಸ್-6 ಬಸ್ಸುಗಳನ್ನು ಖರೀದಿಸುವ ಯೋಜನೆ ಇರುತ್ತದೆ.

13. ಕೇಂದ್ರ ಸರ್ಕಾರದ PM e Seva Bus ಯೋಜನೆಯಡಿ ಒಟ್ಟು 200 ಇಲೆಕ್ಟ್ರಿಕ್ ಬಸ್ಸುಗಳನ್ನು ಒದಗಿಸುವ ಯೋಜನೆ ಇರುತ್ತದೆ. ವಿವರ ಈ ಕೆಳಗಿನಂತಿವೆ.

| ನಗರ | ಬಸ್ಸುಗಳ ಸಂಖ್ಯೆ |
|---|---|
| ಬೆಳಗಾವಿ | 100 |
| ಧಾರವಾಡ (ಹುಬ್ಬಳ್ಳಿ-ಧಾರವಾಡ) | 100 |

ಸದರಿ ವಾಹನಗಳ ಖರೀದಿ ಟೆಂಡರ್‌ನ್ನು ಕೇಂದ್ರ ಸರ್ಕಾರದಿಂದ MoHUA ಮತ್ತು CESL ಮೂಲಕ ಟೆಂಡರ್ ಆಹ್ವಾನಿಸಲಾಗುತ್ತಿದೆ. ಇಲೆಕ್ಟ್ರಿಕ್ ಬಸ್ಸುಗಳ ನಿರ್ವಹಣೆಗಳಿಗೆ ಘಟಕ ನಿರ್ಮಾಣ ಮತ್ತು ವಿದ್ಯುತ್ ಸಂಪರ್ಕಕ್ಕೆ ಅವಶ್ಯವಿರುವ ಅನುದಾನ ಕುರಿತು ಸರ್ಕಾರದ ಗಮನಕ್ಕೆ ತರಲಾಗಿದೆ.

**ಕ.ಕ.ರ.ಸಾ.ನಿಗಮ**

"ಶಕ್ತಿ ಯೋಜನೆ" ಯಡಿ ಕರ್ನಾಟಕ ರಾಜ್ಯದ (Domicile of Karnataka) ಮಹಿಳೆಯರು (ವಿದ್ಯಾರ್ಥಿನಿಯರು ಸೇರಿದಂತೆ) ಮತ್ತು ಲಿಂಗತ್ವ ಅಲ್ಪ ಸಂಖ್ಯಾತರು ಕ.ಕ.ರ.ಸಾ.ನಿಗಮದ ನಗರ, ಸಾಮಾನ್ಯ, ವೇಗದೂತ ಸಾರಿಗೆ ಗಳಲ್ಲಿ ರಾಜ್ಯದ ಒಳಗೆ ಮಾತ್ರ (ಅಂತರರಾಜ್ಯ/ ಪ್ರತಿಷ್ಠಿತ ಸಾರಿಗೆಗಳನ್ನು ಹೊರತುಪಡಿಸಿ) ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

1. ವಿದ್ಯಾರ್ಥಿ ಪಾಸುಗಳ ವಿತರಣೆಯನ್ನು ಗಣಕೀಕೃತಗೊಳಿಸಲಾಗಿದೆ.
2. ಪ್ರಯಾಣಿಕರಿಗೆ ಮುಂಗಡ ಆಸನ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
3. ಕಕರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return) ಪ್ರಯಾಣಕ್ಕೆ ಶೇ.10ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.
4. ಪ್ರಯಾಣಿಕರ ಅನುಕೂಲಕ್ಕಾಗಿ ಸಾರಿಗೆಗಳ ಮಾಹಿತಿಯನ್ನು ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
5. ಪ್ರತಿ ತಿಂಗಳು ಮೊದಲನೇಯ ಸೋಮವಾರದಂದು ಎಲ್ಲಾ ವಿಭಾಗಗಳಲ್ಲಿ ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಕಾರ್ಯ ಕ್ರಮದಲ್ಲಿ ಸ್ವೀಕೃತವಾಗುವ ಮನವಿ/ಅಹವಾಲುಗಳನ್ನು ಪಡೆದು ಕೊಂಡು ಕ್ರಮ ಜರುಗಿಸಲಾಗುತ್ತಿದೆ.
6. ಗಣಕೀಕೃತ ಅಧಾರಿತ ಚಾಲನಾ ವೃತ್ತಿ ಪರೀಕ್ಷೆಯ ಮುಖಾಂತರ ಪಾರದರ್ಶಕವಾಗಿ ಚಾಲನಾ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.
7. ಅಪಘಾತದಿಂದಾಗುವ ದುಷ್ಪರಿಣಾಮ ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿಯನ್ನು ಮೂಡಿಸುವ ಸಲುವಾಗಿ "ಸಂಚಾರ ಸಭಾ ವಾಹನ" ವನ್ನು ಎಲ್ಲಾ ಘಟಕಗಳಿಗೆ ನಿಯೋಜಿಸಿ ಜಾಗೃತಿ ಕಾರ್ಯಕ್ರಮ/ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ.
8. ತಾಂತ್ರಿಕವಾಗಿ ಉನ್ನತ ದರ್ಜೆಯ ಬಸ್ಸುಗಳನ್ನು ನಿಗಮದ ವಾಹನ ಬಲಕ್ಕೆ ಸೇರ್ಪಡೆಗೊಳಿಸಲಾಗುತ್ತಿದೆ. ಬಿ.ಎಸ್-6 ವಾಹನಕ್ಕೆ ಮುಂಭಾಗ ಮತ್ತು ಹಿಂಬದಿ ಕ್ಯಾಮೆರಾ ಅಳವಡಿಸಲಾಗಿದೆ.
9. ಸಾರ್ವಜನಿಕ ಪ್ರಯಾಣಿಕರ ಸುಖಕರ ಪ್ರಯಾಣಕ್ಕಾಗಿ ನೂತನ ತಂತ್ರಜ್ಞಾನ ಆಧಾರಿತ ಕಲ್ಯಾಣ ರಥ (ವೋಲ್ವೋ ಮಲ್ಟಿ ಆಕ್ಸಲ್ ಸ್ಲೀಪರ್) ಪ್ರತಿಷ್ಠಿತ (Premium) ಸ್ಲೀಪರ್ ಸಾರಿಗೆಗಳನ್ನು ಕಲಬುರಗಿ-ಬೆಂಗಳೂರು, ವಿಜಯಪುರ-ಬೆಂಗಳೂರು ಹಾಗೂ ಸಿಂಧನೂರು-ಬೆಂಗಳೂರು ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
10. ಸಾರ್ವಜನಿಕರ ದೂರುಗಳಿಗೆ ಸ್ಪಂದಿಸಲು ವಿಭಾಗ ಮಟ್ಟದಲ್ಲಿ ಹಾಗೂ ಕೇಂದ್ರ ಕಛೇರಿ ಮಟ್ಟದಲ್ಲಿ 24/7 ಸಹಾಯವಾಣಿ/ನಿಯಂತ್ರಣಾ ಕೊಠಡಿಯನ್ನು ಸ್ಥಾಪಿಸಲಾಗಿದೆ.